ಶ್ರೀ ರಾಜಶೇಖರ ಶೀಲವಂತ ವೀರಣ್ಣ :— ಹುಣಗುಂದ ತಾಲ್ಲೂಕಿನಲ್ಲಿ ಬಹಳಷ್ಟು ಯೋಜನೆಗಳು ಉಳಿದ ಎರಡೂ ತಾಲ್ಲೂಕುಗಳಲ್ಲಿ ಆದ ರೀತಿಯಲ್ಲಿ ಆಗಿಲ್ಲ ಎಂಬುದು ತಮ್ಮ ಅನುಮೋದನೆಯನ್ನು ನೋಡಿದರೆ ಗೊತ್ತಾಗುತ್ತದೆ. ಆಫೀಸನ್ನು ಇನ್ನೂ ಸ್ವಲ್ಪ ಚುರುಕುಗೊಳಿಸಿ ಇನ್ನೂ ಹೆಚ್ಚು ಕೆಲಸ ಆಗುವ ರೀತಿಯಲ್ಲಿ ತಾವು ನೋಡಿಕೊಳ್ಳಬೇಕು.

ಅಧ್ಯಕ್ಷರು :— ಉಚಿತವಾಗಿ ಕೊಟ್ಟುಬಿಡಿ.

ಗ್ರಾಮ ಸಹಾಯಕ ಹುದ್ದೆ ಖಾಯಂ ಮಾಡುವ ಬಗ್ಗೆ.

333(2162) ಶ್ರೀ ವಸಂತ ವಿ. ಸಾಲಿಯಾನ (ಕಾಪು) :— ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಂದಾಯ ಇಲಾಖೆಯಲ್ಲಿ ವಿವಿಧ ಗ್ರಾಮಗಳಲ್ಲಿ ಗ್ರಾಮ ಕರಣಿಕರ ಜೊತೆ ನಿಗಧಿತ ವೇತನಪಡಿಯಲ್ಲಿ ಸೇವೆ ಸಲ್ಲಿಸುತ್ತಿರುವ ಗ್ರಾಮ ಸಹಾಯಕರ ಹುದ್ದೆಗಳನ್ನು ಖಾಯಂ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಆ) ಹಾಗಿದ್ದಲ್ಲಿ, ಇವರನ್ನು ಎಂದಿನಿಂದ ಖಾಯಂಗೊಳಿಸಲಾಗುವುದು?

ಶ್ರೀ ಬಿ. ಸೋಮಶೇಖರ್ (ಕಂದಾಯ ಸಚಿವರು) :—

ಅ) ಈ ವಿಷಯವನ್ನು ಸರ್ಕಾರವು ಸಚಿವಸಂಪುಟದ ಉಪ ಸಮಿತಿಯ ಶಿಫಾರಸ್ಸಿನಂತೆ ಪರಿಶೀಲಿಸುತ್ತಿದೆ.

ಆ) ಈಗ ಉದ್ಭವಿಸುವುದಿಲ್ಲ.

ಶ್ರೀ ವಸಂತ ವಿ. ಸಾಲಿಯಾನ :— ಮಾನ್ಯ ಅಧ್ಯಕ್ಷರೇ, ಉತ್ತರದಲ್ಲಿ ಸರ್ಕಾರವು ಸಚಿವ ಸಂಪುಟದ ಉಪ ಸಮಿತಿಯ ಶಿಫಾರಸ್ಸಿನಂತೆ ಪರಿಶೀಲಿಸುತ್ತಿದೆ ಎಂದು ಹೇಳಿದ್ದಾರೆ. ಸುಮಾರು 30 ವರ್ಷಗಳಿಂದ ಕರ್ನಾಟಕ ರಾಜ್ಯದ 175 ತಾಲ್ಲೂಕುಗಳಲ್ಲಿ ಸಾವಿರಾರು ಗ್ರಾಮ ಸಹಾಯಕರ ಹುದ್ದೆಯಲ್ಲಿ ಕೆಲಸ ಮಾಡುವಂಥ ಬಡ ಕಾರ್ಮಿಕರು ಇವತ್ತು ಮನೆ ಮನೆಗೆ ತೆರಳಿ, ಬಿಲ್ ಕಲೆಕ್ಷನ್, ನೋಟೀಸ್ ಮತ್ತು ಇತರ ಕಂದಾಯ ಇಲಾಖೆಯ ಕೆಲಸಗಳನ್ನು ಮಾಡಿಕೊಂಡು ಬಂದಿದ್ದಾರೆ. ಇದರ ಬಗ್ಗೆ ತಾವು ಸಚಿವ ಸಂಪುಟದಲ್ಲಿ ಮಾಡಿದಂಥ ತೀರ್ಮಾನ ಉಪ ಸಮಿತಿಯ ತೀರ್ಮಾನ ಏನಿದೆ, ಕಳೆದ 5 ವರ್ಷಗಳಲ್ಲಿ ಏನು ತೀರ್ಮಾನ ಮಾಡಿದಿರಿ? ಮತ್ತು ಅವರನ್ನು ಯಾವಾಗ ಖಾಯಂ ಮಾಡುವಂಥ ಶಿಫಾರಸ್ ತಾವೇನು ಮಾಡಿದ್ದೀರಿ? ಅದನ್ನು ದಯವಿಟ್ಟು ತಿಳಿಸಬೇಕಾಗಿ ನಾನು ಕೇಳುತ್ತಿದ್ದೇನೆ.

ಶ್ರೀ ಬಿ. ಸೋಮಶೇಖರ್ :— ಮಾನ್ಯ ಸಭಾಧ್ಯಕ್ಷರೇ, ಈ ಗ್ರಾಮ ಸಹಾಯಕರ ನೇಮಕಾತಿಯನ್ನು ಕರ್ನಾಟಕ ಆಡಳಿತ ನ್ಯಾಯಾಧಿಕರಣ "ಡಿ" ನೌಕರರಾಗಿ ಪರಿಗಣಿಸಬೇಕೆಂದು ಒಂದು ಆದೇಶವನ್ನು ಕೊಡಲಾಗಿತ್ತು. ಆದಾದ ಮೇಲೆ ಅವರು, ಇದನ್ನು ಅನುಷ್ಠಾನ ಕೊಡಿಸಬೇಕೆಂದು ಕಂಟೆಂಪ್ಟ್‌ನ್ನು ಹಾಕಿದರು. ಆ ಕಂಟೆಂಪ್ಟ್ ಮೇಲೆ ಸುಪ್ರೀಂ ಕೋರ್ಟ್‌ನಲ್ಲಿ ತಡೆಯಾಜ್ಞೆ ಇದೆ. ಈ ಮಧ್ಯೆ ಸರ್ಕಾರದ ಮಟ್ಟದಲ್ಲಿ ಒಂದು ಸಚಿವ ಸಂಪುಟದ ಉಪ ಸಮಿತಿಯನ್ನು ರಚನೆ ಮಾಡಿ, ಉಪ ಸಮಿತಿಯವರು ತಾತ್ವಿಕವಾಗಿ ಇವರನ್ನು 'ಡಿ' ಗ್ರೂಪ್ ನೌಕರರನ್ನಾಗಿ ಪರಿಗಣಿಸಬಹುದೆಂದು ಶಿಫಾರಸ್ ಮಾಡಿದ್ದಾರೆ. ಆ ಶಿಫಾರಸ್ ಸಚಿವ ಸಂಪುಟದ ಮುಂದೆ ಬಂದು ಸಾಕಾದಷ್ಟು ಚರ್ಚೆಯಾಗಿದೆ. ಸಚಿವ ಸಂಪುಟದ ಮುಖ್ಯಮಂತ್ರಿಗಳಿಗೆ ಅಧಿಕಾರ ಕೊಟ್ಟಿದೆ. ನಾನು ಒಪ್ಪುತ್ತೇನೆ, ಇವರು ಬಹಳ ಬಡ ಕುಟುಂಬದಿಂದ ಬಂದಿರತಕ್ಕವರು ಸುಮಾರು 25-26 ವರ್ಷಗಳಿಂದ ಪ್ರತಿಯೊಂದು ಗ್ರಾಮದಲ್ಲೂ ಹೆಚ್ಚು ಕೆಲಸ ಮಾಡತಕ್ಕಂಥವರು. ಯಾರಾದರೂ ಒಬ್ಬರು ಅಧಿಕಾರಿಗಳು ಹೋದರೆ ತಕ್ಷಣ ಸಿಗತಕ್ಕಂಥವರು ಈ ಗ್ರಾಮ ಸಹಾಯಕರು. ಅವರಿಗೆ ಟೈಮ್ ಇಲ್ಲ, ಕೆಲಸ ಮಾಡುತ್ತಾ ಇದ್ದಾರೆ. ಅವರ ಬಗ್ಗೆ ಸರ್ಕಾರಕ್ಕೆ ಸಹಾನುಭೂತಿ ಇದೆ ಮಾನ್ಯ ಮುಖ್ಯಮಂತ್ರಿಗಳು ಆದಷ್ಟು ಶೀಘ್ರವಾಗಿ ಸಭೆಯನ್ನು ಕರೆದು, ತೀರ್ಮಾನವನ್ನು ತೆಗೆದುಕೊಳ್ಳುತ್ತಾರೆಂಬ ಆಶಯವನ್ನು ವ್ಯಕ್ತಮಾಡುತ್ತೇವೆ. ಅವರ ಬಗ್ಗೆ ಸರ್ಕಾರಕ್ಕೆ ಸಹಾನುಭೂತಿ ಇದೆ.

ಶ್ರೀ ವಸಂತ ವಿ. ಸಾಲಿಯಾನ :— ಇನ್ನು 15 ದಿವಸದೊಳಗೆ ತಾವೇನಾದರೂ ಸಚಿವ ಸಂಪುಟದಲ್ಲಿ ತೀರ್ಮಾನ ಮಾಡುತ್ತೀರಾ? ಏಕೆಂದರೆ, ಕಳೆದ 5 ವರ್ಷದಲ್ಲಿ ಅನೇಕಬಾರಿ ಈ ಪ್ರಶ್ನೆಯನ್ನು ಕೇಳಿದ್ದೇನೆ. ತಮಗೆ ಕಳಕಳಿ ಇದೆ, ಸರ್ಕಾರಕ್ಕೆ ಕಳಕಳಿ ಇದೆಯೆಂದು ಹೇಳಿದ್ದೀರಿ. ನನ್ನ ಕಳಕಳಿ ಏನೆಂದರೆ, ಸುಮಾರು 6 ಸಾವಿರಕ್ಕಿಂತ ಹೆಚ್ಚು ಜನರು ಕೆಲಸ ಮಾಡುತ್ತಿದ್ದಾರೆ. ಇದರ ಬಗ್ಗೆ ತಾವು ಆದಷ್ಟು ಬೇಗ, ಈ ಚುನಾವಣೆ ಬರುವ ಮುಂಚೆ, ತಮ್ಮ ಸಚಿವ ಸಂಪುಟದಲ್ಲಿ ತೀರ್ಮಾನ ಮಾಡಿ, ಅವರನ್ನು ಖಾಯಂ ಹುದ್ದೆಗೆ ನೇಮಕಾತಿ ಮಾಡಬೇಕಾಗಿ ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಯು.ಆರ್. ಸಭಾಪತಿ :— ಮಾನ್ಯ ಅಧ್ಯಕ್ಷರೇ, ಕಳೆದ ಅಧಿವೇಶನದಲ್ಲಿ ತಮ್ಮ ಅನುಪಸ್ಥಿತಿಯಲ್ಲಿ ಕಾನೂನು ಸಚಿವರೇ ಒಂದು ತಿಂಗಳಲ್ಲಿ ಮಾಡುತ್ತೇವೆಂದು ಅವರು ಪ್ರತಿ ಸಲ ಸಚಿವ ಸಂಪುಟದ ಉಪ ಸಮಿತಿಯಲ್ಲಿ ತೀರ್ಮಾನ ಆಗಿದೆ, ಮತ್ತೆ ಮುಖ್ಯಮಂತ್ರಿಗಳಿಗೆ ಕೊಟ್ಟಿದ್ದೇವೆಂದು ಹೇಳುತ್ತಾ ಬಂದರೆ, ಅವರ ಪರಿಸ್ಥಿತಿ ಏನಾಗಬೇಕು? ಇವತ್ತು ಏನಾಗಿದೆ ಎಂದರೆ, ಈ ಗ್ರಾಮ ಸಹಾಯಕರುಗಳನ್ನೆಲ್ಲಾ ಜಿಲ್ಲಾಧಿಕಾರಿಗಳು ಅಡಿಗೆ ಕೆಲಸಕ್ಕೆ ಮತ್ತು ತಟ್ಟೆ ತೊಳೆಯುವುದಕ್ಕೆ ಮನೆಯಲ್ಲಿ ಕಸ ಗುಡಿಸುವುದಕ್ಕೆ ಉಪಯೋಗಿಸುತ್ತಾ ಇದ್ದಾರೆ. ಇದನ್ನು ತಮ್ಮ ಗಮನಕ್ಕೆ ತರುತ್ತಾ ಇದ್ದೇನೆ. ಇದರ ಬಗ್ಗೆ ಉಡುಪಿಯಲ್ಲಿ ದೊಡ್ಡ ಮುಷ್ಕರವೇ ಆಗಿದೆ. ಜಿಲ್ಲಾಧಿಕಾರಿಗಳ ಮನೆಯಲ್ಲಿ ಕಸ ಗುಡಿಸುವುದಕ್ಕೆ ಮಾರುಕಟ್ಟೆಯಲ್ಲಿ

ತರಹಾರಿ ತರುವುದಕ್ಕೆ, ಇದಕ್ಕೆಲ್ಲಾ ಉಪಯೋಗಿಸುತ್ತಿದ್ದಾರೆ. ಇದು ನಮ್ಮ ಪರಿಸ್ಥಿತಿ. ದಯವಿಟ್ಟು ಇದರ ಬಗ್ಗೆ ತಾವು ಗಂಭೀರವಾಗಿ ಪರಿಗಣಿಸಬೇಕು ಮತ್ತು ಕೊನೆಯಪಕ್ಷ ನಿಮ್ಮ ಈ ಅವಧಿ ಮುಗಿಯುವುದರೊಳಗೆ ಅವರಿಗೆ ನೇಮಕಾತಿ ಮಾಡಿದರೆ ಬಹುಶಃ ನಿಮಗೆ ಮತ್ತು ಇಡೀ ಸರ್ಕಾರಕ್ಕೆ ಅನುಕೂಲವಾಗಬಹುದು.

ಶ್ರೀ ಬಿ. ಸೋಮಶೇಖರ್ :— ಮಾನ್ಯ ಸಭಾಧ್ಯಕ್ಷರೇ, ನಾನು ಮೊದಲೇ ಹೇಳಿದೆ. ಅವರ ಬಗ್ಗೆ ಅವರಿಗೆ ಎಷ್ಟು ಕಳಕಳಿ ಇದೆಯೋ ಅದಕ್ಕೂ ಹೆಚ್ಚಾಗಿ ನಮಗೆ ಇದೆ. ಆದರೆ, ಈ ಬಡವರುಗಳಿಗೆ ಸಹಾಯ ಮಾಡಬೇಕೆಂದಾಗ, ಅಷ್ಟು ಸುಲಭವಾಗಿ ಮಾಡತಕ್ಕ ವ್ಯವಸ್ಥೆ ನಮ್ಮಲ್ಲಿ ಇಲ್ಲ. ನಾವು ಮುಖ್ಯಮಂತ್ರಿಗಳಿಗೆ ಅಧಿಕಾರ ಕೊಟ್ಟಿದ್ದೇವೆ. ಅವರು ಸೂಕ್ತವಾದ ತೀರ್ಮಾನವನ್ನು ಆದಷ್ಟು ಬೇಗ ತೆಗೆದುಕೊಳ್ಳುತ್ತಾರೆ, ನಾವು ಕೂಡ ಒತ್ತಡ ತರುತ್ತೇವೆಂಬ ಮಾತನ್ನು ಹೇಳುತ್ತೇನೆ.

ಶ್ರೀ ವಸಂತ ವಿ. ಸಾಲಿಯಾನ :— ಪಕ್ಷಾತೀತವಾಗಿ, ಇವರ ಬಗ್ಗೆ ಮಾನ್ಯ ಸದಸ್ಯರೆಲ್ಲರಿಗೂ ಕಳಕಳಿ ಇದೆ. ಆದ್ದರಿಂದ ನಾವು ರಿಕ್ವೆಸ್ಟ್ ಮಾಡುತ್ತಿದ್ದೇವೆ.

ಚಿಕ್ಕನಾಯಕನಹಳ್ಳಿ ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್‌ನಿಂದ ರೈತರ ಬಾವಿಗಳಿಗೆ ಸಾಲ ಸೌಲಭ್ಯ.

334(2201) ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) :— ಮಾನ್ಯ ಸಹಕಾರ ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕನಾಯಕನಹಳ್ಳಿ ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನವರು ರೈತರ ಬಾವಿಗಳಿಗೆ ಸಾಲ ಕೊಡುತ್ತಿರುವುದು ನಿಜವೇ?

ಆ) ಹಾಗಿದ್ದಲ್ಲಿ ಸರ್ಕಾರ ವಿಫಲ ಬಾವಿಗಳಿಗೆ ರೈತರ ಸಾಲ ವಜಾ ಮಾಡಿ ಅಂತಹ ಹಣವನ್ನು ತಾನೇ ಭರಿಸುತ್ತಿದ್ದುದು ನಿಜವೇ?

ಇ) ಹಾಗಿದ್ದಲ್ಲಿ 1993-94 ರಲ್ಲಿ ಮೇಲೆ ತಿಳಿಸಿದ ಬ್ಯಾಂಕಿನಿಂದ ಗುರ್ತಿಸಲಾದ ವಿಫಲ ಬಾವಿಗಳ ಸಂಖ್ಯೆ ಎಷ್ಟು?

ಈ) ಹಾಗೇ ಗುರ್ತಿಸಿದ ಬಾವಿಗಳಿಗೆ ಸರ್ಕಾರದಿಂದ ಹಣ ಪಾವತಿಸಲಾಗಿದೆಯೇ?

ಉ) ಹಾಗಿಲ್ಲದಿದ್ದಲ್ಲಿ ರೈತರಿಂದ ಬರಬೇಕಾದ ಸಾಲವನ್ನು ಬೇಬಾಕಿ ಮಾಡಿ ಬ್ಯಾಂಕಿನವರು ತೀರ್ಮಾನ ಮಾಡಿರುವುದು ನಿಜವೇ?